**ದಿನಾಂಕ 16.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಶ್ರೀ. ಬಿ.ಆರ್. ವಾದಿಯ ಪರ ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳು ನಿಜ ಇರುತ್ತವೆ. ಅವು ನನ್ನ ಮಾಹಿತಿ ಪ್ರಕಾರ ಇರುತ್ತವೆ. ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ.

ದಿನಾಂಕ 21.11.2022 ರ ನೊಂದಾಯಿತ ಕ್ರಯದ ಕರಾರು ಪತ್ರ, ನೋಟೀಸ್‌ನ ಕಚೇರಿ ಪ್ರತಿ, 6 ಅಂಚೆ ರಶೀದಿಗಳು, 6 ಅಂಚೆ ಸ್ವೀಕೃತಿಗಳು, ಸರ್ವೆ ನಂ.725/2 ರ ಪಹಣಿ ಪತ್ರಿಕೆ ಮತ್ತು ಆಸ್ತಿ ಋಣಭಾರ ಪತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.1 ರಿಂದ 6 ಎಂದು ಗುರುತಿಸಲಾಯಿತು.

ನಿಪಿ.1 ರಲ್ಲಿರುವ ನನ್ನ 6 ಸಹಿಗಳನ್ನು, 3 ರಿಂದ 6ನೇ ಪ್ರತಿವಾದಿಯರ ತಲಾ 5 ಸಹಿಗಳನ್ನು, ಸಾಕ್ಷಿದಾರರಾದ ಶಿವಮೂರ್ತಿ ಮತ್ತು ಕೌಶಿಕ್ ರವರ ಸಹಿಗಳನ್ನು ಮತ್ತು ಪತ್ರಬರಹಗಾರ ರೇವಣ್ಣ ರವರ ಸಹಿಯನ್ನು ಈಗ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.1(ಎ) ಯಿಂದ (ಹೆಚ್) ಎಂದು ಗುರುತಿಸಲಾಯಿತು.

ನಿಪಿ.1 ರಲ್ಲಿರುವ 1 ಮತ್ತು 2ನೇ ಪ್ರತಿವಾದಿಯರ ಹೆಬ್ಬೆಟ್ಟಿನ ಗುರುತುಗಳನ್ನು ನೋಡಿ ಗುರುತಿಸಿರುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**
**ತಿ.ನರಸೀಪುರ.**